# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಕಾರ್ಕಳ.

ದಿನಾಂಕ 2 ನೇ ಫೆಬ್ರವರಿ ಮಾಹೆ 2026 ನೇ ಇಸವಿ.

ಸಿ.ಸಿ. ನಂಃ **1699/2025**

ರಾಜ್ಯ ಸರ್ಕಾರದ ಪರವಾಗಿ
ಪೊಲೀಸ್ ವೃತ್ತನಿರೀಕ್ಷಕರು,
ಕಾರ್ಕಳ ವೃತ್ತ, ಕಾರ್ಕಳ,
ಉಡುಪಿ ಜಿಲ್ಲೆ. ... ಪಿರ್ಯಾದುದಾರರು

- ವಿರುದ್ಧ -

ಆನಂದ ಆಚಾರ್ಯ,
ಪ್ರಾಯಃ 62 ವರ್ಷ,
ತಂದೆಃ ಶಂಕ್ರಯ್ಯ ಆಚಾರ್ಯ,
ವಾಸಃ ನಂಃ1-91, ಶ್ರೀ ದುರ್ಗಾ,
ತಾಲೂಕು ಕಚೇರಿ ಹತ್ತಿರ,
ಕುಕ್ಕಂದೂರು ಗ್ರಾಮ,
ಕಾರ್ಕಳ ತಾಲೂಕು, ಉಡುಪಿ ಜಿಲ್ಲೆ. ... ಆರೋಪಿ

## ಆಪಾದನೆ

ಆರೋಪಿಯಾದ ನೀವು, ನಿಮ್ಮ ಮೋಟಾರು ಸೈಕಲ್ ನೋಂದಣಿ ಸಂಖ್ಯೆಃ KA-20-EU-5737 ನೇಯದರ ಚಾಲಕನಾಗಿದ್ದು, ದಿನಾಂಕ 03.08.2025 ರಂದು ಸಂಜೆ 7.30 ಗಂಟೆಗೆ ಕಾರ್ಕಳ ತಾಲೂಕು ನೀರೆ ಗ್ರಾಮದ ನೀರೆ ಜಡ್ಡಿನಂಗಡಿ ಎಂಬಲ್ಲಿ ಸದ್ರಿ ಮೋಟಾರು ಸೈಕಲ್‌ನಲ್ಲಿ ಮೃತೆ ಶ್ರೀಮತಿ ಉಷಾ ಎಂಬುವರನ್ನು ಸಹ ಸವಾರೆಯಾನ್ನಾಗಿ ಕುಳ್ಳಿರಿಸಿಕೊಂಡು ಉಡುಪಿ ಕಡೆಯಿಂದ ಕಾರ್ಕಳ ಕಡೆಗೆ ಅತೀವೇಗ ಹಾಗೂ ಅಜಾಗರೂಕತೆಯಿಂದ ಚಲಾಯಿಸಿ ನಿಯಂತ್ರಣ ತಪ್ಪಿ ರಸ್ತೆಯಲ್ಲಿದ್ದ ಹೊಂಡಕ್ಕೆ ಬಿದ್ದಿದು, ಆ ಮೂಲಕ ಭಾರತೀಯ ನ್ಯಾಯ ಸಂಹಿತಾ ಕಲಂ 281 ಅಡಿಯಲ್ಲಿ ಅಪರಾಧ ಎಸಗಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪ ಇದೆ.

ಎರಡನೇಯದಾಗಿ, ಆರೋಪಿಯಾದ ನೀವು ಮೇಲೆ ಹೇಳಿದ ದಿನ, ಸಮಯ ಹಾಗೂ ಸ್ಥಳದಲ್ಲಿ ಬಿದ್ದ ಪರಿಣಾಮ ಸದ್ರಿ ಶ್ರೀಮತಿ ಉಷಾ ರವರು ರಸ್ತೆಯ ಮೇಲೆ ಬಿದ್ದು ಅವರ ತಲೆಗೆ ಗಂಭೀರ ಸ್ವರೂಪದ ಗಾಯಗೊಂಡು ಮಂಗಳೂರು ಕೆ.ಎಮ್.ಸಿ ಆಸ್ಪತ್ರೆಗೆ ದಾಖಲು ಮಾಡಿದ್ದು, ಅಲ್ಲಿ ಚಿಕಿತ್ಸೆಯಲ್ಲಿರುತ್ತಾ ದಿನಾಂಕ 10.08.2025 ರಂದು ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿದ್ದು, ಆ ಮೂಲಕ ಭಾರತೀಯ ನ್ಯಾಯ ಸಂಹಿತಾ ಕಲಂ 106 ಅಡಿಯಲ್ಲಿ ಅಪರಾಧ ಎಸಗಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪ ಇದೆ.

**ಆರೋಪಿ:**

ಪ್ರಶ್ನೆ 1: ಮೇಲೆ ಹೇಳಿದ ಆರೋಪವನ್ನು ಕೇಳಿರುವಿರಾ?

ಉತ್ತರಃ ಆರೋಪಿಃ

ಪ್ರಶ್ನೆ 2: ತಪ್ಪು ಒಪ್ಪಿಕೊಳ್ಳುತ್ತೀರೋ ಅಥವಾ ಪ್ರತಿರಕ್ಷೆ ಸಾಕ್ಷಿ ಮಾಡಲು ಬಯಸುತ್ತೀರೋ?

ಉತ್ತರಃ ಆರೋಪಿಃ

(ಆರೋಪಿಗೆ ಮೇಲಿನ ಆಪಾದನೆಯನ್ನು ಓದಿ ಹೇಳಿ ವಿವರಿಸಿದ್ದು, ಅವರು ಅದನ್ನು ಸರಿಯಾಗಿ ತಿಳಿದುಕೊಂಡು ಉತ್ತರಿಸಿದ್ದಾರೆ ಎಂಬುದಾಗಿ ಈ ಮೂಲಕ ದೃಢೀಕರಿಸುತ್ತೇನೆ.)

ಪ್ರ.ಸಿ.ನ್ಯಾ. ಮತ್ತು ಪ್ರ.ದ.ನ್ಯಾ.ದಂ.,
ಕಾರ್ಕಳ.